REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 16 । 23 ಜುಲೈ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ಆಗಸ್ಟ್‌ನಲ್ಲಿ ನಡೆಯುವ ದ್ವೈಮಾಸಿಕ ನೀತಿ ಸಭೆಯಲ್ಲಿ ರೆಪೋ ದರ ಇಳಿಕೆ ಸಾಧ್ಯತೆ

**ಹೊಸದಿಲ್ಲಿ:** ಈ ವರ್ಷ ಮತ್ತೊಮ್ಮೆ ಬಡ್ಡಿ ದರ ಇಳಿಸುವುದಕ್ಕೆ ಸಂಬಂಧಿಸಿದಂತೆ ಆರ್‌ಬಿಐ ಮುಕ್ತವಾಗಿದೆ. ಹಣದುಬ್ಬರ ತೀವ್ರ ಇಳಿಕೆ ಹಾಗೂ ಬೆಳವಣಿಗೆ ಹಾದಿಯನ್ನು ಅವಲೋಕಿಸಿ ನಾವು ತೀರ್ಮಾನ ಕೈಗೊಳ್ಳುತ್ತೇವೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

"ಜೂನ್‌ನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣ ಶೇ.2.10ರಷ್ಟಿದೆ. ಇದು ಆರು ವರ್ಷಗಳಲ್ಲೇ ಅತಿ ಕಡಿಮೆ. ಇಳಿಕೆ ಹಾದಿ ಇದೇ ರೀತಿ ಇದ್ದರೆ ರೆಪೊ ದರ ಇಳಿಕೆಯಾಗುತ್ತದೆ," ಎಂಬ ಇಂಗಿತವನ್ನು ಮಲ್ಹೋತ್ರಾ ವ್ಯಕ್ತಪಡಿಸಿದ್ದಾರೆ.

"ನಾವೀಗ ತಟಸ್ಥ ನೀತಿಯನ್ನು ಅನುಸರಿಸುತ್ತಿದ್ದೇವೆ. ಮುಂದಿನ ಪರಿಸ್ಥಿತಿಯನ್ನು ಗಮನಿಸಿ ತೀರ್ಮಾನವನ್ನು ಕೈಗೊಳ್ಳುತ್ತೇವೆ. ಆರ್ಥಿಕ ಬೆಳವಣಿಗೆಗಿಂತಲೂ ಹಣದುಬ್ಬರ ತುಂಬಾ ಮುಖ್ಯ ಎಂದು ಯಾರೊಬ್ಬರೂ ಹೇಳಲಾಗದು. ಈ ಎರಡೂ ಅಂಶಗಳು ಒಂದರೊಳಗೊಂದು ಮಿಳಿತವಾಗಿರುತ್ತವೆ," ಎಂದಿದ್ದಾರೆ.

"ಆರ್ಥಿಕ ಬೆಳವಣಿಗೆ ದರಕ್ಕಿಂತ ಹೆಚ್ಚಿನ ಆದ್ಯತೆಯನ್ನು ಹಣದುಬ್ಬರ ಪ್ರಮಾಣಕ್ಕೆ ನೀಡಬೇಕು ಎಂಬ ಮಾತು ಸರಿಯಿಲ್ಲ. ಬೆಲೆಯಲ್ಲಿ ಸ್ಥಿರತೆ ಸಾಧಿಸುವುದು ನಮ್ಮ ಮೇಲೆ ಇರುವ ಮುಖ್ಯ ಹೊಣೆ. ನಾವು ಆರ್ಥಿಕ ಬೆಳವಣಿಗೆಯನ್ನೂ ಗಮನಿಸುತ್ತೇವೆ. ಇವೆರಡೂ ನಮಗೆ ಪ್ರಮುಖವಾಗುತ್ತವೆ. ಇವೆರಡರಲ್ಲಿ ಯಾವುದೇ ಒಂದಕ್ಕೆ ಮಾತ್ರ ನಾವು ಈಗ ಹೆಚ್ಚು ಒತ್ತು ನೀಡುತ್ತೇವೆ ಎಂದು ಹೇಳಲಾರೆ. ಬಡ್ಡಿದರ ಇಳಿಕೆಯಿಂದ ಅನುಭೋಗ ಮತ್ತು ಹೂಡಿಕೆ ಪ್ರಮಾಣದಲ್ಲಿ ಏರಿಕೆಯಾಗುತ್ತದೆ," ಎಂದು ಅವರು ಪ್ರತಿಪಾದಿಸಿದ್ದಾರೆ. ಈ ವರ್ಷ ಆರ್‌ಬಿಐ ಒಟ್ಟು ಶೇ.1ರಷ್ಟು ರೆಪೊದರವನ್ನು ಇಳಿಸಿದೆ. ಮುಂದಿನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆ ಆಗಸ್ಟ್ 4ರಂದು ನಡೆಯಲಿದೆ.




## 12th Batch (DUCBM) ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ Diploma in Urban Cooperative Banking Management ಕೋರ್ಸ್‌ನ್ನು ಪ್ರಾರಂಭಿಸಿರುತ್ತದೆ. 11ನೇ ಬ್ಯಾಚಿನ ಪರೀಕ್ಷೆಯ ಫಲಿತಾಂಶ ಸದ್ಯದಲ್ಲಿಯೆ ಬರಲಿದ್ದು, ಈಗ 12ನೇ ಬ್ಯಾಚ್‌ನ ಡಿಯುಸಿಬಿಎಂ ಕೋರ್ಸ್‌ನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಕೋರ್ಸ್‌ನ್ನು ಮಹಾಮಂಡಳ, ಆರ್‌ಐಸಿಎಂ ಮತ್ತು ಎನ್‌ಸಿಸಿಟಿ ನವದೆಹಲಿ ಇವುಗಳ ಸಹಯೋಗದೊಂದಿಗೆ ನಡೆಸಲಾಗುವುದು. ಸದರಿ ಕೋರ್ಸ್ ನೌಕರರ ಮುಂಬಡ್ತಿಗೆ ಅನ್ವಯವಾಗುತ್ತದೆ ಹಾಗೂ ಬ್ಯಾಂಕಿನ ಅಭಿವೃದ್ಧಿಗೆ ಸಹಕಾರವಾಗುತ್ತದೆ. ಪ್ರತಿ ಅಭ್ಯರ್ಥಿಗೆ ಕೋರ್ಸ್‌ನ ಶುಲ್ಕ ರೂ.5,700.+(GST)1026. ಒಟ್ಟು 6,726/-ಗಳನ್ನು ನಿಗದಿಪಡಿಸಲಾಗಿದೆ. ಅರ್ಜಿಯನ್ನು ಭರ್ತಿಮಾಡಿ ಕಳುಹಿಸಲು ಕೊನೆಯ ದಿನಾಂಕ: 25.07.2025 ಆಗಿರುತ್ತದೆ. ಈ ಸದರಿ ಕೋರ್ಸನ ಅವಧಿಯು ಮೂರು ತಿಂಗಳು ಆಗಿರುತ್ತದೆ.

ಆದ್ದರಿಂದ ತಮ್ಮ ಬ್ಯಾಂಕಿನ ಸಿಬ್ಬಂದಿಗಳನ್ನು Diploma in Urban Cooperative Banking Management (DUCBM) ಕೋರ್ಸಿಗೆ ನಿಯೋಜಿಸಿ ಆದಷ್ಟು ಬೇಗನೆ ಅರ್ಜಿಯನ್ನು ಮಹಾಮಂಡಳಕ್ಕೆ ಕಳುಹಿಸಬೇಕಾಗಿ ಕೋರಲಾಗಿದೆ. ಈ ಕೋರ್ಸ್ ಶುಲ್ಕವನ್ನು ಚೆಕ್ / ಎನ್‌ಇಎಫ್‌ಟಿ ಮೂಲಕ ಮಹಾಮಂಡಳದ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಬಹುದಾಗಿದೆ. ಬ್ಯಾಂಕ್ ಖಾತೆ ವಿವರ ಈ ಕೆಳಗಿನಂತಿದೆ. (ಎನ್.ಇ.ಎಫ್.ಟಿ ವರ್ಗಾವಣೆ ಮಾಡುವಾಗ ದಯವಿಟ್ಟು ನಿಮ್ಮ ಬ್ಯಾಂಕಿನ ವಿವರಗಳನ್ನು ತಪ್ಪದೆ ನಮೂದಿಸುವುದು ಹಾಗೂ UTR ಸಂಖ್ಯೆಯನ್ನು ತಪ್ಪದೆ ತಿಳಿಸುವುದು.)

The Karnataka State Co-Operative Urban Banks Federation Ltd., Bengaluru.

Idbi Bank, Mission Road Branch, Bengaluru

SB A/C : 0008104000297219, IFSC : IBKL0000008

ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಉಪ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ (7411332655) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ಇವರುಗಳನ್ನು ಸಂಪರ್ಕಿಸಬಹುದಾಗಿದೆ.

ಇಪಿಎಫ್‌ಓ ನಿಯಮದಲ್ಲಿ ಭಾರೀ ಬದಲಾವಣೆ, 10 ವರ್ಷಕ್ಕೊಮ್ಮೆ ಪೂರ್ತಿ ಪಿಎಫ್ ಮೊತ್ತ ಹಿಂಪಡೆಯಲು ಅವಕಾಶ 3
ಪ್ರಸಕ್ತ ಆರ್ಥಿಕ ವರ್ಷದಲ್ಲಿ ನೇರ ತೆರಿಗೆ ಸಂಗ್ರಹ ಇಳಿಕೆ 4
ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



# ಕೃಷಿಯೊಂದಿಗೆ ಆಧುನಿಕ ತಂತ್ರಜ್ಞಾನದ ಸಮನ್ವಯ ಅಗತ್ಯ

ನಮ್ಮ ದೇಶದ ಸುಮಾರು ಶೇ.65ರಷ್ಟು ಜನರು ಕೃಷಿ ಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೊಡಗಿಸಿಕೊಂಡಿದ್ದಾರೆ. ಇದರಿಂದ ದೇಶದ ಜಿಡಿಪಿಗೆ ಶೇ.18ರಷ್ಟು ಕೊಡುಗೆ ಇದೆ. ಆದರೆ ನಮ್ಮಲ್ಲಿ ಕೃಷಿ ಕ್ಷೇತ್ರ ಹೆಚ್ಚಾಗಿ ಪ್ರಕೃತಿಯ ಮೇಲೆ ಅವಲಂಬಿತವಾಗಿದ್ದು, ಹವಾಮಾನ ಮತ್ತು ಜಾಗತಿಕ ತಾಪಮಾನ ಏರಿಕೆಯ ಸಮಸ್ಯೆಗಳು ರೈತರನ್ನು ತಲ್ಲಣಗೊಳಿಸುತ್ತದೆ.

ಡಿಜಿಟಲ್ ತಂತ್ರಜ್ಞಾನದ ಬಳಕೆಯಿಂದ ಮುಂದಿನ ದಿನಗಳಲ್ಲಿ ಹೆಚ್ಚಿನ ಸುಧಾರಣೆ ಹಾಗೂ ದಕ್ಷತೆಯನ್ನು ಕೃಷಿಯಲ್ಲಿ ತರಬಹುದಾಗಿದೆ. ಬೆಳೆ ಇಳುವರಿಯನ್ನು ಸುಧಾರಿಸಲು ಮತ್ತು ರೈತ ಸಮುದಾಯದ ಆದಾಯವನ್ನು ಹೆಚ್ಚಿಸಲು ಇದು ಸಹಾಯ ಮಾಡುತ್ತದೆ. ಇದರ ಬಳಕೆ ವಿಸ್ತರಿಸಿದಂತೆ ಕೃಷಿ ಉತ್ಪಾದನೆ ಹೆಚ್ಚಾಗಲಿದೆ ಹಾಗೂ ಲಾಭದಾಯವಾಗಲಿದೆ. ಅದ್ದರಿಂದ ನವೀನ ತಂತ್ರಜ್ಞಾನಗಳನ್ನು ಬಳಸುವುದನ್ನು ರೈತರಿಗೆ ಕಲಿಸುವುದು ಅಗತ್ಯವಾಗಿದೆ.

ಈ ಹಿನ್ನೆಲೆಯಲ್ಲಿ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ಕೃಷಿ ಕ್ಷೇತ್ರವನ್ನು ಲಾಭದಾಯಕಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಇದು ಸಮಸ್ಯೆಗಳ ಸರಮಾಲೆಯಿಂದ ಕಂಗೆಟ್ಟಿರುವ ರಾಜ್ಯದ ರೈತರಲ್ಲಿ ಒಂದಿಷ್ಟು ಭರವಸೆ ಮೂಡಿಸುವಂತಹದಾಗಿದೆ. ಇಳುವರಿ ಹೆಚ್ಚಳದ ಜೊತೆಗೆ ಮಾರುಕಟ್ಟೆ ಸಾಧ್ಯತೆಗಳ ಕುರಿತು ರೈತರಿಗೆ ನೆರವು ನೀಡಲು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಆಧರಿಸಿ ಕಾರ್ಯ ನಿರ್ವಹಿಸಲು ಕೃಷಿ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಿದೆ. ಈ ಕೇಂದ್ರಗಳ ಮೂಲಕ, ಆಯಾ ಪ್ರದೇಶದ ಮಣ್ಣಿನ ಮಾದರಿ, ಹವಾಗುಣ, ತೇವಾಂಶ, ಮಳೆಯ ಪ್ರಮಾಣದೊಂದಿಗೆ ಪ್ರಸ್ತುತ ಇರುವ ಬೆಳೆ ಪದ್ಧತಿ ಮತ್ತು ಇಳುವರಿಯ ವಿಶ್ಲೇಷಣೆ ನಡೆಯಲಿದೆ.

ಈ ವಿಶ್ಲೇಷಣೆ ರೈತರಿಗೆ ಹಾಗೂ ಕೃಷಿ ನೀತಿ ನಿರೂಪಕರಿಗೆ ನೆರವಾಗಲಿದೆ. ತಂತ್ರಾಂಶದ ಮಾಹಿತಿ ಆಧರಿಸಿ ಕೀಟಬಾಧೆಗಳನ್ನು ನಿವಾರಿಸುವುದರ ಜೊತೆಗೆ, ಪೋಷಕಾಂಶಗಳ ಕೊರತೆಯನ್ನು ನೀಗಿಸಲೂ ಸಾಧ್ಯವಾಗಲಿದೆ. ಜೊತೆಗೆ, ಆಯಾ ಪ್ರದೇಶಕ್ಕೆ ಅನುಗುಣವಾಗಿ ಅಧಿಕ ಲಾಭ ತರುವ ಬೆಳೆಗಳನ್ನು ಆಯ್ಕೆ ಮಾಡಿಕೊಳ್ಳುವ ಕುರಿತು ನೆರವಾಗಲು ರಾಜ್ಯ ಮಟ್ಟದ ತಂತ್ರಜ್ಞರ ಸಮಿತಿಯನ್ನೂ ಸರ್ಕಾರ ರಚಿಸಿಲಾಗಿದ್ದು, ಪ್ರಸಕ್ತ ಸಾಲಿನಲ್ಲಿ, ಭತ್ತದ ಬೆಳೆಯಲ್ಲಿ ತಂತ್ರಜ್ಞಾನದ ಮಾದರಿಯನ್ನು ಅಳವಡಿಸಲು ಬಳ್ಳಾರಿ, ದಾವಣಗೆರೆ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ವಿಜಯನಗರ ಮತ್ತು ಯಾದಗಿರಿ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಆಯಾ ವರ್ಷದ ಹವಾಮಾನ, ಅತಿವೃಷ್ಟಿ, ಅನಾವೃಷ್ಟಿಯ ಆಧಾರದಲ್ಲಿ ಯಾವ ಋತುವಿನಲ್ಲಿ ಯಾವ ಬೆಳೆಗೆ ಹೆಚ್ಚಿನ ಬೇಡಿಕೆ ಇರುತ್ತದೆ ಎನ್ನುವುದನ್ನು ಕೃಷಿ ಸೇವಾ ಕೇಂದ್ರಗಳು ಅಂದಾಜು ಮಾಡಲಿದ್ದು, ಯಾವ ಬೆಳೆಗಳಿಗೆ ಉತ್ತಮ ಬೆಲೆ ದೊರೆಯಬಹುದು ಎನ್ನುವ ಮಾಹಿತಿಯನ್ನೂ ಒದಗಿಸಲಿವೆ. ಇದರಿಂದಾಗಿ, ರೈತರು ತಾವು ಬೆಳೆಯಬಹುದಾದ ಬೆಳೆಗಳನ್ನು ನಿರ್ಧರಿಸುವುದು ಸುಲಭವಾಗುತ್ತದೆ. ಮುಂದಿನ ದಿನಗಳಲ್ಲಿ ಕೃಷಿ ಸೇವಾ ಕೇಂದ್ರಗಳ ಮೂಲಕ, ರೈತರ ಕೃಷಿ ಜೀವನದಲ್ಲಿ ಸುಧಾರಣೆ ಆಗಲಿದೆ. ಆದ್ದರಿಂದ ಕೃಷಿಯೊಂದಿಗೆ ಆಧುನಿಕ ತಂತ್ರಜ್ಞಾನದ ಸಮನ್ವಯ ಅಗತ್ಯವಾಗಿದ್ದು ರೈತರನ್ನು ಈ ನಿಟ್ಟಿನಲ್ಲಿ ಸಜ್ಜುಗೊಳಿಸಬೇಕಾಗಿದ್ದು ಅಧಿಕಾರಿಗಳ ಹಾಗೂ ರೈತ ಸಂಪರ್ಕದಲ್ಲಿರುವ ನೌಕರರ ಜವಾಬ್ದಾರಿಯಾಗಿದೆ ಎಂದು ಹೇಳಬಯಸುತ್ತೇನೆ.

▸▸ ಎಚ್.ಕೆ. ಪಾಟೀಲ

## ಪಟ್ಟಣ ಸಹಕಾರ ಬ್ಯಾಂಕುಗಳ ಗಮನಕ್ಕೆ

ಮಹಾಮಂಡಳವು "ವಾರಪತ್ರಿಕೆ" ಹಾಗೂ "ತ್ರೈಮಾಸಿಕ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆ" ಎಂಬ ಎರಡು ಪತ್ರಿಕೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಹಕಾರ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ ಹಾಗೂ ಇತರೆ ಉಪಯುಕ್ತ ಸುದ್ದಿ / ವಿಚಾರಗಳನ್ನು ಹಾಗೂ ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾವಣೆಗೊಳಪಡುವ ಸಹಕಾರಿ ಕಾನೂನು ವಿದ್ಯಮಾನಗಳ ಕುರಿತು ಪ್ರಶ್ನೋತ್ತರ, ವಿವಿಧ ಬ್ಯಾಂಕುಗಳ ಯಶೋಗಾಥೆ, ಪ್ರಗತಿ ಚಿತ್ರ, ಬ್ಯಾಂಕುಗಳಲ್ಲಿ ಜರುಗಿರುವ ವಿವಿಧ ಸಮಾರಂಭಗಳ ವಿವರಗಳನ್ನು ಪ್ರಕಟಿಸಲಾಗುತ್ತಿದೆ. ಈಗಾಗಲೇ ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ಷಿಕ ಮಹಾಸಭೆಗಳು ಜರುಗುತ್ತಿದ್ದು, ಮಹಾಸಭೆಯ ಛಾಯಾಚಿತ್ರ (ಫೋಟೊ)ವನ್ನು ಮತ್ತು ವರದಿಗಳನ್ನು ಹಾಗೂ ಬ್ಯಾಂಕಿಗೆ ಸಂಬಂಧಿಸಿದ ವರದಿಗಳನ್ನು ಕೂಡಲೇ ಮಹಾಮಂಡಳಕ್ಕೆ ಅಂಚೆ ಮೂಲಕ ಅಥವಾ ಇ-ಮೇಲ್ ವಿಳಾಸಕ್ಕೆ (email: editorkubf1@gmail.com ಅಥವಾ kscubfed@gmail.comಗೆ ಕಳುಹಿಸಿಕೊಟ್ಟಲ್ಲಿ ಮಹಾಮಂಡಳದ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

## ಸರ್ ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್ ಆರ್‌ಬಿಐ ನಿರ್ಬಂಧ ತೆರವು

**ಬೆಂಗಳೂರು** : ಸರ್ ಎಂ.ವಿಶ್ವೇಶ್ವರಯ್ಯ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ 2024–25ರ ಲೆಕ್ಕಪರಿಶೋಧನೆ ನಡೆಸಿದ ಶಾಸನಬದ್ಧ ಲೆಕ್ಕಪರಿಶೋಧಕರು, ಬ್ಯಾಂಕಿನ ಠೇವಣಿಗಳು 913.26 ಕೋಟಿ ರೂ., ಸಾಲ ಮತ್ತು ಮುಂಗಡಗಳು 515.14 ಕೋಟಿ ರೂ., ನಿವ್ವಳ ಲಾಭ 11.56 ಕೋಟಿ ರೂ., ಸಿ.ಆರ್.ಎ.ಆರ್ ಪ್ರಮಾಣ 24.56% ಹಾಗೂ ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ 0% ಇದೆ ಎಂದು ದೃಢೀಕರಿಸಿ ಭಾರತೀಯ ರಿಸರ್ವ್ ಬ್ಯಾಂಕಿಗೆ ವರದಿಯನ್ನು ಸಲ್ಲಿಸಿದ್ದಾರೆ.

ಬ್ಯಾಂಕಿನ ಈ ಉತ್ತಮ ಆರ್ಥಿಕ ಅಂಕಿ ಅಂಶಗಳು ಮತ್ತು ಕಾರ್ಯಕ್ಷಮತೆಯ ಆಧಾರದ ಮೇಲೆ, ಭಾರತೀಯ ರಿಸರ್ವ್ ಬ್ಯಾಂಕ್ ಹೇರಲಾಗಿದ್ದ ಎಲ್ಲಾ ನಿರ್ಬಂಧಗಳನ್ನು 2025ರ ಜುಲೈ 11ರಂದು ತೆಗೆದುಹಾಕಿದೆ. ಈ ಕುರಿತು ಮಾತನಾಡಿದ ಬ್ಯಾಂಕಿನ ಅಧ್ಯಕ್ಷರಾದ ಎಸ್.ಎಸ್.ಶ್ರೀನಿವಾಸ ರಾವ್, ನಮ್ಮ ಬ್ಯಾಂಕು ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್‌ಗಳ ಸಾಲಿನಲ್ಲಿ ಅಗ್ರಸ್ಥಾನದಲ್ಲಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಯಶಸ್ಸನ್ನು ಸಾಧಿಸಲಿದೆ. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಗ್ರಾಹಕರಿಗೆ ಮತ್ತಷ್ಟು ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಬ್ಯಾಂಕಿನ ನಿರ್ದೇಶಕ ಮಂಡಳಿಯು ಕಾರ್ಯಪ್ರವೃತ್ತವಾಗಿದೆ ಎಂದು ತಿಳಿಸಿದರು.

# ಇಪಿಎಫ್‌ಒ ನಿಯಮದಲ್ಲಿ ಭಾರೀ ಬದಲಾವಣೆ, 10 ವರ್ಷಕ್ಕೊಮ್ಮೆ ಪೂರ್ತಿ ಪಿಎಫ್ ಮೊತ್ತ ಹಿಂಪಡೆಯಲು ಅವಕಾಶ

**ಹೊಸದಿಲ್ಲಿ:** ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ)ಯು ತನ್ನ ಸದಸ್ಯರಿಗೆ ಶೀಘ್ರದಲ್ಲೇ ಶುಭ ಸುದ್ದಿ ನೀಡಲಿದೆ. ಪಿಎಫ್ ಚಂದಾದಾರರು ಪ್ರತಿ 10 ವರ್ಷಗಳಿಗೊಮ್ಮೆ ತಮ್ಮ ಖಾತೆಯಲ್ಲಿನ ಹಣವನ್ನು ಪೂರ್ಣ ಇಲ್ಲವೇ ಆಂಶಿಕವಾಗಿ ಹಿಂಪಡೆಯಲು ನಿಯಮಗಳನ್ನು ಸರಳಗೊಳಿಸಲು ಕೇಂದ್ರ ಸರಕಾರ ಮುಂದಾಗಿದೆ.

"ಸದಸ್ಯರು ತಮ್ಮ ಖಾತೆಯಿಂದ ಪ್ರತಿ 10 ವರ್ಷಕ್ಕೊಮ್ಮೆ ಹಣವನ್ನು ಪಡೆಯುವ ಪ್ರಸ್ತಾಪವನ್ನು ಇಪಿಎಫ್‌ಒ ಮಂಡಿಸಿದ್ದು ಇದನ್ನು ಕೇಂದ್ರ ಸರಕಾರ ಪರಿಗಣಿಸುವ ಸಾಧ್ಯತೆ ಇದೆ. ಹಣವನ್ನು ಹಿಂಪಡೆಯಲು ಯಾವುದೇ ಕಾರಣ ನೀಡುವ ಅಗತ್ಯವಿಲ್ಲ. ಈಗ ಇಪಿಎಫ್‌ನಲ್ಲಿ ಶೇ. 8.25ರಷ್ಟು ವಾರ್ಷಿಕ ಬಡ್ಡಿ ಇದೆ. ಇದಕ್ಕೆ ಬದಲಾಗಿ ಖಾತೆದಾರರು ಮ್ಯೂಚುವಲ್ ಫಂಡ್ ಇಲ್ಲವೇ ಷೇರುಗಳಲ್ಲಿ ಹಣವನ್ನು ಹೂಡಿಕೆ ಮಾಡಿ ಹೆಚ್ಚು ಲಾಭ ಗಳಿಸಲು ಅನುಕೂಲ ವಾಗುತ್ತದೆ ಎಂಬ ಕಾರಣಕ್ಕೆ ಕಾಲಾವಧಿ ಮಿತಿಯನ್ನು ಕಡಿತಗೊಳಿಸಲಾಗುತ್ತದೆ," ಎಂದು ಮೂಲಗಳು ತಿಳಿಸಿವೆ. ಸದ್ಯ ಇಪಿಎಫ್ 7 ಕೋಟಿ ಚಂದಾದಾರರನ್ನು ಹೊಂದಿದೆ.

ಸಾಮಾನ್ಯ ಠೇವಣಿಗಳಿಗೆ ಹೋಲಿಸಿದರೆ ಪಿಎಫ್‌ಗೆ ಹೆಚ್ಚಿನ ಬಡ್ಡಿಯೂ ಸಿಗುತ್ತಿದೆ. ಆದರೆ, ಇದಕ್ಕಿಂತ ಉತ್ತಮ ಆಯ್ಕೆಗಳೂ ಇವೆ. ಹಾಲಿ




ನಿಯಮಗಳ ಅಡಿಯಲ್ಲಿ ಇಪಿಎಫ್‌ಒ ಸದಸ್ಯರು ನಿವೃತ್ತರಾದ ನಂತರ ಅಥವಾ ಎರಡು ತಿಂಗಳಿಗಿಂತ ಹೆಚ್ಚು ಕಾಲ ಉದ್ಯೋಗ ಇಲ್ಲದೇ ಇದ್ದಾಗ ಮಾತ್ರ ಪೂರ್ಣ ಪ್ರಮಾಣದಲ್ಲಿ ಹಣ ಹಿಂಪಡೆಯಲು ಅವಕಾಶ ಇದೆ. ಇದಲ್ಲದೆ ಭಾಗಶಃ ಹೆಚ್ಚಿನ ಮೊತ್ತದ ಹಣ ಪಡೆಯಲೂ ಕೆಲವು ಷರತ್ತುಗಳಿವೆ. ಆಸ್ಪತ್ರೆ ಖರ್ಚಿಗೆ, ಮನೆ ಕಟ್ಟಲು ಅಥವಾ ಖರೀದಿಸಲು, ಶಿಕ್ಷಣಕ್ಕೆ ಹಾಗೂ ಮದುವೆಗೆ ಈ ರೀತಿ ದೊಡ್ಡ ಮೊತ್ತದ ಹಣ ಪಡೆಯಬಹುದಾಗಿದೆ. ಇದೀಗ ಒಂದೊಮ್ಮೆ ಬದಲಾವಣೆಗಳು ಜಾರಿಗೆ ಬಂದಲ್ಲಿ ಇಪಿಎಫ್‌ಒ ಸದಸ್ಯರು ತಮ್ಮ 30ನೇ ವಯಸ್ಸಿನಲ್ಲೂ ಹಣವನ್ನು ಪೂರ್ತಿಯಾಗಿ ಹಿಂಪಡೆಯಬಹುದು. ತಮ್ಮ ಇಪಿಎಫ್ ಉಳಿತಾಯವನ್ನು ಏನು ಮಾಡಬೇಕು ಎಂಬುದನ್ನು ಇವರೇ ನಿರ್ಧರಿಸಬಹುದು.

ಸದ್ಯ ಇದು ಸರಕಾರದ ಪರಿಶೀಲನೆಯಲ್ಲಿ ಇರುವುದರಿಂದ ಸರಕಾರವು ಪ್ರತಿ 10 ವರ್ಷಗಳಿಗೊಮ್ಮೆ ಸಂಗ್ರಹವಾದ ನಿಧಿಯ ಶೇ. 60ರಷ್ಟನ್ನು ಮಾತ್ರ ಹಿಂಪಡೆಯಲು ಅನುಮತಿ ನೀಡಲೂಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ತಿಂಗಳಿನಿಂದ ಅಂದರೆ ಜುಲೈನಿಂದ ಇಪಿಎಫ್ ಸದಸ್ಯರು ಭೂಮಿ ಖರೀದಿಸಲು ಅಥವಾ ಮನೆ ನಿರ್ಮಿಸಲು ತಮ್ಮ ನಿಧಿಯ ಶೇ. 90ರಷ್ಟು ಹಣವನ್ನು ಹಿಂಪಡೆಯಲು ಅವಕಾಶ ನೀಡಲಾಗಿದೆ. ಇದಕ್ಕೂ ಮೊದಲು, ಸತತ ಐದು ವರ್ಷಗಳ ಕಾಲ ನಿರಂತರವಾಗಿ ಠೇವಣಿ ಸಲ್ಲಿಕೆ ಮಾಡಿದವರು ಮಾತ್ರ ತಮ್ಮ ವಸತಿ ಅಗತ್ಯಗಳಿಗಾಗಿ ಶೇ. 90ರಷ್ಟು ಹಣವನ್ನು ಹಿಂಪಡೆಯಲು ಅರ್ಹತೆ ಪಡೆದಿದ್ದರು. ಈ ಮಿತಿಯನ್ನು ಮೂರು ವರ್ಷಗಳಿಗೆ ಸಡಿಲಿಸಲಾಗಿದೆ.

## 2024-25ನೇ ಆರ್ಥಿಕ ವರ್ಷದ ಐಟಿಆರ್-2 ಸಲ್ಲಿಕೆ ಆರಂಭ

**ನವದೆಹಲಿ :** 2024-25ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳು ಮತ್ತು ಹಿಂದೂ ಅವಿಭಕ್ತ ಕುಟುಂಬಗಳು (ಎಚ್‌ಯುಎಫ್) ಐಟಿಆರ್-2 ಅನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು ಎಂದು ಆದಾಯ ತೆರಿಗೆ ಇಲಾಖೆ ಕಳೆದವಾರ ತಿಳಿಸಿದೆ.ಇ-ಫೈಲಿಂಗ್ ಪೋರ್ಟಲ್ ಮೂಲಕ ಐಟಿಆರ್-2 ಫಾರ್ಮ್ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಿದೆ. ಈ ನಮೂನೆಯಡಿ ಅರ್ಹ ತೆರಿಗೆದಾರರು ರಿಟರ್ನ್ಸ್ ಸಲ್ಲಿಸಬಹುದಾಗಿದೆ ಎಂದು ಇಲಾಖೆ 'ಎಕ್ಸ್'ನಲ್ಲಿ ತಿಳಿಸಿದೆ.

ಸರ್ಕಾರವು ಈಗಾಗಲೇ 2025-26ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿ ಐಟಿಆರ್ ಸಲ್ಲಿಸುವ ಗಡುವನ್ನು ಸೆಪ್ಟೆಂಬರ್ 15ರವರೆಗೆ ವಿಸ್ತರಿಸಿದೆ.



# ಜಿಎಸ್‌ಟಿ : 3-4 ವರ್ಷದ ಲೆಕ್ಕ ತರುವುದೆಲ್ಲಿಂದ? ಎಲ್ಲರಿಗೂ ಶೇ.18ರಷ್ಟು ತೆರಿಗೆಯಿಂದ ಭಾರಿ ಹೊರೆ ನೋಟಿಸ್‌ನಿಂದ ಬೇಕರಿ, ಇತರೆ ಸಣ್ಣ ವ್ಯಾಪಾರಿಗಳಿಗೆ ತೊಂದರೆ

**ಬೆಂಗಳೂರು:** ಚಹಾ, ಹಾಲು-ಮೊಸರು, ಹಣ್ಣು-ತರಕಾರಿ, ಬೇಕರಿ ಉತ್ಪನ್ನಗಳು ಸೇರಿ ಬೇರೆ ಬೇರೆ ಜಿಎಸ್‌ಟಿ ತೆರಿಗೆ ಸ್ಲ್ಯಾಬ್ ಹೊಂದಿರುವ ವಸ್ತುಗಳನ್ನು ಮಾರಾಟ ಮಾಡಿರುವ ವ್ಯಾಪಾರಿಗಳನ್ನು ಒಂದೇ ತಕ್ಕಡಿಯಲ್ಲಿ ನೋಡುವ ಮೂಲಕ ಶೇ.18ರಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ನಿಗದಿಪಡಿಸಿ, ಭಾರಿ ಮೊತ್ತದ ಬಡ್ಡಿ ಮತ್ತು ದಂಡ ಕಟ್ಟುವಂತೆ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೋಟಿಸ್ ನೀಡುತ್ತಿರುವುದು ಬಡ ವ್ಯಾಪಾರಿಗಳಿಗೆ ಭಾರಿ ಹೊರೆಯಾಗಿ ಪರಿಣಮಿಸಿದೆ.

ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ಈ ಕ್ರಮವನ್ನು ಅವೈಜ್ಞಾನಿಕ ಮತ್ತು ವಿವೇಚನ ರಹಿತ ಎಂದು ಟೀಕಿಸಿರುವ ಹೆಸರಾಂತ ಆರ್ಥಿಕ ಸಲಹೆಗಾರ ವಿಜಯ್ ರಾಜೇಶ್, ಸಣ್ಣ ಬೇಕರಿಯಲ್ಲಿ ಜಿಎಸ್‌ಟಿ ವಿನಾಯಿತಿ ಇರುವ ಮತ್ತು ಜಿಎಸ್‌ಟಿ ವ್ಯಾಪ್ತಿಗೆ ಬರುವ ವಸ್ತುಗಳನ್ನೂ ಮಾರಾಟ ಮಾಡಲಾಗುತ್ತದೆ. ಈ ಎಲ್ಲವನ್ನು ಒಂದೇ ರೀತಿಯ ಜಿಎಸ್‌ಟಿಗೆ ಪರಿಗಣಿಸಿದರೆ ಹೇಗೆ ಎಂದು ಪ್ರಶ್ನಿಸಿದರು.

ಇನ್ನು ವಹಿವಾಟಿಗೆ ಸಂಬಂಧಿಸಿದ ವಿವರಣೆ ನೀಡಿ ಎಂದು ಕೇಳಲಾಗಿದೆ. ಆದರೆ, ಮೂರ್ನಾಲ್ಕು ವರ್ಷಗಳ ಹಿಂದೆ ಮಾಡಿರುವ ವ್ಯಾಪಾರದ ಲೆಕ್ಕದ ವಿವರಣೆಯನ್ನು ಏಕಾಏಕಿ ನೀಡುವಂತೆ ಕೇಳಿದರೆ ಅವರು ಕೊಡುವುದು ಹೇಗೆ? ಇಡೀ ವರ್ಷದಲ್ಲಿ ನಡೆದಿರುವ ಬ್ಯಾಂಕ್ ಟ್ರಾನ್ಸ್ಯಾಕ್ಷನ್ ಅನ್ನು ಡೌನ್‌ಲೋಡ್ ಮಾಡಿಕೊಂಡು ವಿಶ್ಲೇಷಣೆ ಮಾಡಲು ಸಾಧ್ಯವೇ? ಅವುಗಳಿಗೆ ಸಂಬಂಧಿಸಿದ ಚೀಟಿ, ಸ್ವೀಕೃತಿಗಳನ್ನು ವರ್ಷಗಳವರೆಗೆ ಇಟ್ಟುಕೊಂಡಿರುತ್ತಾರೆಯೇ? ಎಂದು ವಿಜಯ್ ರಾಜೇಶ್ ಕೇಳಿದರು.

ಕೇವಲ ಬ್ಯಾಂಕ್ ಖಾತೆಯಲ್ಲಿ ನಡೆದಿರುವ ಟ್ರಾನ್ಸ್ಯಾಕ್ಷನ್ ಆಧಾರದ ಮೇಲೆ ನೋಟಿಸ್ ನೀಡಿರುವುದು ಅವೈಜ್ಞಾನಿಕ ಕ್ರಮ. ಹಣ ಸ್ವೀಕರಿಸಿದವರಲ್ಲಿ ಅನೇಕರು ಕೈಸಾಲ, ಸಂಬಂಧಿಕರು, ಸ್ನೇಹಿತರಿಂದಲೂ ಹಣ ಪಡೆದುಕೊಂಡಿರುತ್ತಾರೆ. ಅಲ್ಲದೆ ತುರ್ತಾಗಿ ಪೇಮೆಂಟ್ ಮಾಡಲು ಗೊತ್ತಿರುವುದರಿಂದ ಹಣವನ್ನು ಯುಪಿಐನಲ್ಲಿ ಪಡೆದಿರುತ್ತಾರೆ. ಹೀಗೆ ಪಡೆದಿರುವ ಎಲ್ಲಾ ಹಣವನ್ನು ವ್ಯಾಪಾರದಿಂದ ಬಂದ ಹಣವೆಂದು ಪರಿಗಣಿಸಿ ನೋಟಿಸ್ ನೀಡಿದರೆ ಸಣ್ಣ ವ್ಯಾಪಾರಿಗಳು ಆ ಲೆಕ್ಕಕೊಡಲು ಸಾಧ್ಯವೇ? ಕೈ ಸಾಲಕ್ಕೆ ರಸೀದಿಗಳನ್ನು ಎಲ್ಲಿಂದ ತರುವುದು ಎಂದು ವಿಜಯ್‌ರಾಜೇಶ್ ಪ್ರಶ್ನಿಸಿದರು.




ನೋಟಿಸ್ ನೀಡುವ ಸಂದರ್ಭದಲ್ಲಿ ಅಧಿಕಾರಿಗಳು ವಿವೇಚನೆ ಬಳಸಬೇಕಿತ್ತು. ಬ್ಯಾಂಕ್ ವಹಿವಾಟು ಆಧಾರದ ಮೇಲೆಯೇ ಎಲ್ಲವನ್ನು ನಿಗದಿಪಡಿಸುವ ಬದಲು ವಿಶ್ಲೇಷಣೆ ಮಾಡುವ ಮುಖಾಂತರ ಸಣ್ಣ ವ್ಯಾಪಾರಿಗಳಿಗೆ, ಅವರು ಮಾಡುವ ವ್ಯಾಪಾರ ವಹಿವಾಟುಗಳಿಗೆ ತೊಂದರೆಯಾಗದ ರೀತಿಯಲ್ಲಿ ಹೆಜ್ಜೆಗಳನ್ನು ಇಡಬೇಕಿತ್ತು. ಈಗಲೂ ಕಾಲ ಮಿಂಚಿಲ್ಲ, ಅಧಿಕಾರಿಗಳು ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಬಹುದು ಎಂದು ವಿಜಯ್‌ರಾಜೇಶ್ ಅಭಿಪ್ರಾಯಪಟ್ಟರು.

## ಪ್ರಸಕ್ತ ಆರ್ಥಿಕ ವರ್ಷದಲ್ಲಿ ನೇರ ತೆರಿಗೆ ಸಂಗ್ರಹ ಇಳಿಕೆ

**ನವದೆಹಲಿ:** ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ 1ರಿಂದ ಜುಲೈ 10ರವರೆಗೆ ದೇಶದ ನಿವ್ವಳ ನೇರ ತೆರಿಗೆ ಸಂಗ್ರಹವು ರೂ.5.63 ಲಕ್ಷ ಕೋಟಿಯಾಗಿದೆ. 2024-25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ರೂ.5.70 ಲಕ್ಷ ಕೋಟಿಯಾಗಿತ್ತು. ಇದಕ್ಕೆ ಹೋಲಿಸಿದರೆ ಸಂಗ್ರಹ ಪ್ರಮಾಣವು ಶೇ.1.34ರಷ್ಟು ಇಳಿಕೆಯಾಗಿದೆ. ಹೆಚ್ಚಿದ ಮರುಪಾವತಿಯಿಂದ ಸಂಗ್ರಹ ಪ್ರಮಾಣ ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಕಾರ್ಪೊರೇಟ್ ತೆರಿಗೆ ಸಂಗ್ರಹ ರೂ.2.07 ಲಕ್ಷ ಕೋಟಿಯಷ್ಟಿತ್ತು. ಅದು ಈ ಬಾರಿ ರೂ.2 ಲಕ್ಷ ಕೋಟಿಗೆ ಇಳಿದಿದ್ದು, ಶೇ.3.67ರಷ್ಟು ಕಡಿಮೆಯಾಗಿದೆ ಎಂದು ತಿಳಿಸಿದೆ.





ಕಾರ್ಪೊರೇಟ್ಯೇತರ ತೆರಿಗೆ ರೂ.3.45 ಲಕ್ಷ ಕೋಟಿಯಾಗಿದೆ. ಷೇರು ವಹಿವಾಟು ತೆರಿಗೆ ಸಂಗ್ರಹ ರೂ.17,874 ಕೋಟಿಯಾಗಿದೆ. ಮರುಪಾವತಿಯ ಪ್ರಮಾಣದಲ್ಲಿ ಶೇ 38ರಷ್ಟು ಏರಿಕೆಯಾಗಿದ್ದು, ರೂ.1.02 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು, ನೇರ ತೆರಿಗೆ ಮೂಲಕ ರೂ.25.20 ಲಕ್ಷ ಕೋಟಿ ಸಂಗ್ರಹಿಸಲು ಗುರಿ ಹೊಂದಿದೆ. ಇದು ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ.12.7ರಷ್ಟು ಹೆಚ್ಚಳ. ಈ ಪೈಕಿ ಜುಲೈ 10ರವರೆಗೆ ಶೇ.22.34ರಷ್ಟು ತೆರಿಗೆ ಸಂಗ್ರಹಿಸಿದೆ. ಷೇರು ವಹಿವಾಟು ತೆರಿಗೆ ಮೂಲಕ ರೂ.78 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ.

# ನಮ್ಮ ಮೂಲಭೂತ ಹಣಕಾಸಿನ ಹಕ್ಕುಗಳು ಮತ್ತು ಕರ್ತವ್ಯಗಳು

**ಒಂದು ರಾಷ್ಟ್ರ ಯಶಸ್ವಿ ರಾಷ್ಟ್ರವಾಗಿ ನಿರ್ಮಾಣವಾಗಬೇಕಾದರೆ, ಅಲ್ಲಿನ ಪ್ರಜೆಗಳ ಮೂಲಭೂತ ಹಕ್ಕುಗಳು ಮತ್ತು ಅವರಿಗಿರುವ ಕರ್ತವ್ಯಗಳು ಪ್ರಮುಖ ಪಾತ್ರವಹಿಸುತ್ತಿವೆ. ಇಂಥದ್ದೇ ತಳಹದಿಯ ಮೇಲೆ ನಮ್ಮ ಸಂವಿಧಾನ ರಚನೆಯಾಗಿ, ನಮಗೆ ಹಕ್ಕುಗಳನ್ನು ನೀಡಿದೆ ಮತ್ತು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಸೂಚಿಸಿದೆ. ಆದರೆ, ನಾವು ಇಲ್ಲಿ ಹೇಳಲು ಹೊರಟಿರುವುದು 'ನಮ್ಮ ಮೂಲಭೂತ ಹಣಕಾಸಿನ ಹಕ್ಕುಗಳು ಮತ್ತು ಕರ್ತವ್ಯಗಳ' ಬಗ್ಗೆ. ಹಣಕಾಸು ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಹಕ್ಕುಗಳು ಜನಸಾಮಾನ್ಯರಿಗೆ ಇರಲಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರಿಗೂ ಗೊತ್ತೇ ಇರುವುದಿಲ್ಲ. ಅದರಲ್ಲೂ ವಿಮೆ ಮತ್ತು ಮ್ಯೂಚುವಲ್ ಫಂಡ್‌ಗಳಿಗೆ ಸಂಬಂಧಿಸಿದಂತೆ ಸಾಮಾನ್ಯರ ಜ್ಞಾನ ಅಷ್ಟಕಷ್ಟೆ. ಈ ಹಿನ್ನೆಲೆಯಲ್ಲಿ ಕೆಲವು ಹಣಕಾಸಿನ ಮೂಲಭೂತ ಹಕ್ಕುಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. ಅದೇ ವೇಳೆ, ಹಣಕಾಸಿನ ಕರ್ತವ್ಯಗಳೂ ಇವೆ. ಪ್ರಾಮಾಣಿಕ ತೆರಿಗೆದಾರರಾಗಿ ನಾವು ಕರ್ತವ್ಯಗಳನ್ನೂ ಪೂರೈಸಬೇಕಿದೆ.**



**ಸಾಲದಾತರು ಕಿರುಕುಳ ಮಾಡುವಂತಿಲ್ಲ :** ಒಂದು ವೇಳೆ ನೀವು ಸಾಲ ಪಡೆದು ಅದನ್ನು ಮರುಪಾವತಿಸಲು ಸಾಧ್ಯವಾಗದಿದ್ದರೆ ಸಾಲದಾತರು ಅಥವಾ ರಿಕವರಿ ಏಜೆಂಟ್‌ಗಳು ನಿಮಗೆ ಕಿರುಕುಳ ನೀಡುವಂತಿಲ್ಲ. ಸಾಲ ಮರುಪಾವತಿಗೆ ಸಂಬಂಧಿಸಿದಂತೆ ಸಾಲದಾತ ಕಂಪನಿ, ನಿಮಗೆ 60 ದಿನಗಳ ಮುಂಚಿತವಾಗಿಯೇ ನೋಟಿಸ್ ನೀಡಬೇಕಾಗುತ್ತದೆ. ಈ ಅವಧಿಯಲ್ಲಿ ನಿಮ್ಮ ಅಹವಾಲನ್ನು ಸಂಬಂಧಿಸಿದ ಅಧಿಕೃತ ಅಧಿಕಾರಿಯ ಮುಂದೆ ಮಂಡಿಸಬಹುದು. ಈ ನಿಗದಿತ ಅವಧಿಯಲ್ಲಿ ಸಾಲದಾತರು ಯಾವುದೇ ರೀತಿಯಲ್ಲೂ ನಿಮಗೆ ಕಿರುಕುಳ ನೀಡುವಂತಿಲ್ಲ. ಮತ್ತೆ ಅವರು ನಿಮಗೆ ಮುಂಜಾನೆ 7ರಿಂದ ಸಂಜೆ 7ರೊಳಗೆ ಮಾತ್ರ ಕರೆ ಮಾಡಬೇಕು. ಹೀಗಿದ್ದಾಗ್ಯೂ ಕಿರುಕುಳ ನೀಡಿದರೆ ಸಂಬಂಧಿಸಿದ ಬ್ಯಾಂಕ್‌ಗೆ ದೂರು ನೀಡಬಹುದು. ಅವರು ಈ ಬಗ್ಗೆ ತನಿಖೆ ನಡೆಸುತ್ತಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಎಫ್‌ಐಆರ್ ಕೂಡ ದಾಖಲಿಸಬಹುದು.

**ಕಾರ್ಡ್ ವಂಚನೆಗಳಿಗೆ ದುಡ್ಡು ತೆರಬೇಕಿಲ್ಲ :** ಒಂದು ವೇಳೆ, ನಿಮ್ಮ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್‌ಗಳ ವ್ಯವಹಾರದಿಂದ ವಂಚನೆಯಾದರೆ ಅದಕ್ಕಾಗಿ ತಾವು ಬ್ಯಾಂಕಿಗೆ ದುಡ್ಡು ತೆರಬೇಕಾದ ಅಗತ್ಯವಿಲ್ಲ. ಕಾರ್ಡ್ ವ್ಯವಹಾರದಲ್ಲಿನ ಅಕ್ರಮಕ್ಕೆ ನೀವು ದುಡ್ಡು ಕೊಡದಿರುವುದು ನಿಮ್ಮ ಹಕ್ಕು. ಆದರೆ, ಖಂಡಿತವಾಗಿಯೂ ಅಂಥ ವ್ಯವಹಾರ ನಿಮ್ಮಿಂದಾಗಿರಬಾರದು. ಒಂದು ವೇಳೆ, ನಿಮ್ಮ ಕಾರ್ಡ್‌ಗಳಿಂದ ಅಕ್ರಮ ವ್ಯವಹಾರ ನಡೆದರೆ ಆ ವಿಷಯವನ್ನು ತಕ್ಷಣವೇ ಸಂಬಂಧಿಸಿದ ಬ್ಯಾಂಕುಗಳಿಗೆ ತಿಳಿಸಿಬಿಡಿ. ಅಲ್ಲದೆ, ಇನ್ನೂ ಹೆಚ್ಚಿನ ಹಾನಿಯಾಗದಂತೆ ನೋಡಿಕೊಳ್ಳುವುದಕ್ಕಾಗಿ ಕಾರ್ಡ್ ಬ್ಲಾಕ್ ಮಾಡಿಸಿ. ಇದಲ್ಲದೆ, ಎಫ್‌ಐಆರ್ ಕೂಡ ದಾಖಲಿಸುವ ಅವಕಾಶವೂ ಉಂಟು. ಬಹುತೇಕ ಕಾರ್ಡ್‌ಗಳು, ಕಾರ್ಡ್ ಹೋಲ್ಡರ್‌ರನ್ನು ಅಕ್ರಮಗಳಿಂದ ಮುಕ್ತವಾಗಿಸುವ ಹೊಣೆ ಹೊಂದಿರುತ್ತವೆ.



**ತೆರಿಗೆ ಕಟ್ಟುವ ಕರ್ತವ್ಯ :** ನೀವು ಸಲ್ಲಿಸುವ ತೆರಿಗೆಯಿಂದಲೇ ಸರಕಾರವು ರಾಷ್ಟ್ರ ನಿರ್ಮಾಣಕ್ಕೆ ಮುಂದಾಗುತ್ತದೆ. ಸದ್ಯಕ್ಕೆ ಕೇವಲ ಶೇ.3ರಷ್ಟು ಜನರು ಮಾತ್ರ ಟ್ಯಾಕ್ಸ್ ರಿಟರ್ನ್ ಸಲ್ಲಿಸುತ್ತಿದ್ದಾರೆ. ತೆರಿಗೆ ಕಟ್ಟುವುದು ಕಡ್ಡಾಯ ಮತ್ತು ಅದರಿಂದ ತಪ್ಪಿಸಿಕೊಳ್ಳುವುದು ಅಪರಾಧವಾಗುತ್ತದೆ.



**ಲಾಕರ್ ಸೌಲಭ್ಯದ ಹಕ್ಕು :** ಯಾವುದೇ ಬ್ಯಾಂಕಿನಲ್ಲಿ ಲಾಕರ್ ಸೌಲಭ್ಯ ಪಡೆಯಲು ಆ ಬ್ಯಾಂಕಿನಲ್ಲಿ ನೀವು ಉಳಿತಾಯ ಖಾತೆ ಅಥವಾ ಇನ್ನಿತರ ಬ್ಯಾಂಕಿಂಗ್ ಚಟುವಟಿಕೆಗಳನ್ನು ಹೊಂದಿರಬೇಕಿಲ್ಲ. ಲಾಕರ್ ಸೌಲಭ್ಯ ಪಡೆಯುವುದು ನಿಮ್ಮ ಹಕ್ಕಾಗಿದೆ. ಆದರೆ, ಮೂರು ವರ್ಷದ ಅವಧಿಯ ನಿಶ್ಚಿತ ಠೇವಣಿ ಇಡುವಂತೆ ಸೂಚಿಸಬಹುದು ಮತ್ತು ಲಾಕರ್ ಸೌಲಭ್ಯಕ್ಕೆ ಪ್ರತಿಯಾಗಿ ನೀವು ಶುಲ್ಕವನ್ನು ಮಾತ್ರ ನೀಡಬೇಕಾಗುತ್ತದೆ. ಆಯಾ ಬ್ಯಾಂಕಿನ ಯಾವುದೇ ಪ್ರಾಡಕ್ಟ್‌ಗಳ ಮೇಲೆ ಹೂಡಿಕೆ ಮಾಡಬೇಕೆಂದು ಒತ್ತಾಯಿಸುವಂತಿಲ್ಲ. ಒಂದು ವೇಳೆ, ಆ ರೀತಿ ಒತ್ತಾಯಗಳಿದ್ದರೆ ಬ್ಯಾಂಕಿನ ದೂರು ಕೇಂದ್ರದಲ್ಲಿ ನಿಮ್ಮ ಸಮಸ್ಯೆಯನ್ನು ದಾಖಲಿಸಬಹುದು. ಹೀಗೆ ಮಾಡಿದಾಗಲೂ ಸಮಸ್ಯೆ ಮುಂದುವರಿದರೆ ಸಂಬಂಧಿಸಿದ ಓಂಬುಡ್ಸಮನ್ ಅಥವಾ ನೇರವಾಗಿ ಆರ್‌ಬಿಐಗೆ ದೂರು ಸಲ್ಲಿಸಬಹುದು.




**90 ದಿನಗಳಲ್ಲಿ ತೆರಿಗೆ ಮರುಪಾವತಿ ಹಕ್ಕು :** ಟ್ಯಾಕ್ಸ್ ರಿಟರ್ನ್ ಸಲ್ಲಿಸಿದ 90 ದಿನಗಳೊಳಗೆ ತೆರಿಗೆ ಮರುಪಾವತಿ (ಟ್ಯಾಕ್ಸ್ ರಿಫಂಡ್) ಪಡೆಯುವ ಹಕ್ಕು ನಿಮಗಿದೆ. ಒಂದು ವೇಳೆ ತೆರಿಗೆ ಮರುಪಾವತಿ ಈ ಅವಧಿಯನ್ನು ಮೀರಿದರೆ, ಮರು ಪಾವತಿ ಮೊತ್ತಕ್ಕೆ ಶೇ.0.5ರಷ್ಟು ಬಡ್ಡಿ ಸೇರಿಸಿ ಹಣ ನೀಡಬೇಕಾಗುತ್ತದೆ. ಟ್ಯಾಕ್ಸ್ ರಿಫಂಡ್ ಟಿಡಿಎಸ್‌ನ ಹೆಚ್ಚುವರಿಯಾಗಿರುವುದರಿಂದ, ಟ್ಯಾಕ್ಸ್ ರಿಟರ್ನ್ ಮಾಡಿದ ಬಳಿಕ ಅದನ್ನು ಪಡೆಯುವ ಹಕ್ಕು ಹೊಂದಿರುತ್ತೀರಿ. ಒಂದು ವೇಳೆ, ಟ್ಯಾಕ್ಸ್ ರಿಟರ್ನ್ ಪರಿಷ್ಕರಣೆಗೊಳಪಟ್ಟು ಮೇಲೂ ಮರುಪಾವತಿ ವಿಳಂಬವಾದರೆ ಬಡ್ಡಿಸಹಿತ ಹಣ ದೊರೆಯುತ್ತದೆ. 90 ದಿನಗಳೊಳಗೆ ನಿಮಗೆ ಟ್ಯಾಕ್ಸ್ ರಿಫಂಡ್ ಆಗದಿದ್ದರೆ, ನಿಮ್ಮ ವ್ಯಾಪ್ತಿಯ ತೆರಿಗೆ ಅಧಿಕಾರಿಯನ್ನು ಸಂಪರ್ಕಿಸಬಹುದು. ಅಥವಾ ತೆರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ನಿಮ್ಮ ಪ್ರಶ್ನೆಯನ್ನು ದಾಖಲಿಸಬಹುದು.

**ಸಕಾಲಕ್ಕೆ ನಿಮ್ಮ ಆಸ್ತಿಯ ಸ್ವಾಧೀನ ಹಕ್ಕು :** ಯಾವಾಗ ನೀವು ಆಸ್ತಿಯನ್ನು (ಮನೆ) ಖರೀದಿಸುತ್ತೀರೋ ಆಗ ಒಪ್ಪಂದದಲ್ಲಿ ಸೂಚಿಸಿದ ಸಮಯಕ್ಕೆ ಅದರ ಮೇಲೆ ಒಡೆತನ ಸಾಧಿಸುವ ಹಕ್ಕು ಕೂಡ ನಿಮಗೆ ಇರುತ್ತದೆ. ಒಂದು ವೇಳೆ, ಪ್ರಾಜೆಕ್ಟ್ ವಿಳಂಬವಾದರೆ, ನೀವು ಹೋಮ್‌ಲೋನ್‌ಗಾಗಿ ನೀಡುವ ಇಎಂಐ ಬಡ್ಡಿದರಲ್ಲೇ ಡೆವಲಪರ್ ನಿಮಗೆ ಹಣ ಮರುಪಾವತಿಸಬೇಕಾಗುತ್ತದೆ. ಹಣ ಮರುಪಾವತಿಯನ್ನು ಆತ, ನೀವು ವಿನಂತಿಸಿಕೊಂಡ ದಿನದಿಂದ 45 ದಿನದೊಳಗೇ ನೀಡಬೇಕಾಗುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳಿದ್ದರೆ ಆಯಾ ರಾಜ್ಯಗಳ ರಿಯಲ್ ಎಸ್ಟೇಟ್ ರೆಗ್ಯುಲೇಟರಿ ಅಥಾರಿಟಿ (ರಿಯಲ್ ಎಸ್ಟೇಟ್ ನಿಯಂತ್ರಣಾ ಪ್ರಾಧಿಕಾರ)ಗೆ ದೂರು ಸಲ್ಲಿಸಬಹುದು. ಹೀಗೆ ಬಂದ ದೂರಗಳನ್ನು ಅಧಿಕಾರಿಗಳು 60 ದಿನದೊಳಗೇ ಬಗೆಹರಿಸಬೇಕಾಗುತ್ತದೆ.






**ಸೇವಾ ಶುಲ್ಕ ನಿರಾಕರಿಸುವ ಹಕ್ಕು :** ಒಂದು ವೇಳೆ ನೀವು ರೆಸ್ಟೋರೆಂಟ್‌ನಲ್ಲಿ ಒದಗಿಸಲಾದ ಸೇವೆಯಿಂದ ಸಂತುಷ್ಟರಾಗದಿದ್ದರೆ, ಅವರು ಬಿಲ್‌ನಲ್ಲಿ ನಮೂದಿಸಿರುವ ಸೇವಾ ಶುಲ್ಕವನ್ನು ನಿರಾಕರಿಸುವ ಹಕ್ಕು ಕೂಡ ನಿಮಗಿದೆ. ಸೇವಾ ತೆರಿಗೆ ಅಥವಾ ವ್ಯಾಟ್ ರೀತಿ ಸೇವಾ ಶುಲ್ಕ ಸರಕಾರ ನಿಗದಿಪಡಿಸಿದ ತೆರಿಗೆಯಲ್ಲ. ಯಾಕೆಂದರೆ, ಹೀಗೆ ಪಡೆಯಲಾಗುವ ಸೇವಾ ಶುಲ್ಕ ನೇರವಾಗಿ ಅದು ರೆಸ್ಟೋರೆಂಟ್‌ಗಳ ಖಾತೆಗೆ ಜಮಾ ಆಗುತ್ತದೆ. ಒಂದು ವೇಳೆ ಸೇವಾ ಶುಲ್ಕ ನೀಡುವಂತೆ ಒತ್ತಾಯ ಮಾಡಿದರೆ, ನೀವು ಗ್ರಾಹಕ ವ್ಯವಹಾರಗಳ ಇಲಾಖೆಗೆ ದೂರು ದಾಖಲಿಸಬಹುದು.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಬ್ಯಾಂಕಿನ ನಿರ್ದೇಶಕರೊಬ್ಬರ ಸಹೋದರಿಯರ ಹೆಸರಿನಲ್ಲಿರುವ ಆಸ್ತಿಯ ಮೇಲೆ ಸಹೋದರಿಯರ ಮಗನ ಹೆಸರಿನಲ್ಲಿ ಸಾಲ ಮಂಜೂರು ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಆರ್‌ಬಿಐ ನಿರ್ದೇಶನದನುಸಾರ ನಿರ್ದೇಶಕರ ಸಂಬಂಧಿಗಳಿಗೆ ಸಾಲ ಮಂಜೂರು ಮಾಡಲು ನಿರ್ಬಂಧವಿರುತ್ತದೆ. ಈ ಬಗ್ಗೆ ಕಾನೂನು ಸಲಹೆ ನೀಡಲು ಕೇಳಿಕೊಳ್ಳುತ್ತೇವೆ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ದಾವಣಗೆರೆ ಜಿಲ್ಲೆ.**

**ಉತ್ತರ:** ಭಾರತೀಯ ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಬ್ಯಾಂಕಿನ ನಿರ್ದೇಶಕರಿಗೆ ಸಾಲ ನೀಡುವುದಾಗಲೀ ಅವರು ಬೇರೆಯವರ ಸಾಲಕ್ಕೆ ಜಾಮೀನುದಾರರಾಗುವುದಾಗಲೀ ನಿಷೇಧಿಸಲ್ಪಟ್ಟಿದೆ. ನಿರ್ದೇಶಕರ ತಂಗಿ ಅವರ ಸಂಬಂಧಿ ಎಂದು ಪರಿಗಣಿಸಲ್ಪಟ್ಟರೂ, ತಂಗಿಯ ಮಗ ನಿರ್ದೇಶಕರ ಸಂಬಂಧಿಗಳ ಪಟ್ಟಿಯಲ್ಲಿ ಬರುವುದಿಲ್ಲ. ಹಾಗಾಗಿ ನಿರ್ದೇಶಕರ ತಂಗಿಯ ಮಗನಿಗೆ ಸಾಲ ನೀಡಲು ರಿಜರ್ವ್ ಬ್ಯಾಂಕಿನ ನಿರ್ಬಂಧವಿಲ್ಲ. ಆದಾಗ್ಯೂ, ಆ ಸಾಲಕ್ಕೆ ನಿರ್ದೇಶಕರ ತಂಗಿ ಜಾಮೀನು ನೀಡುವುದಾಗಲಿ, ಅವರ ಆಸ್ತಿಯನ್ನು ಮಗನ ಸಾಲಕ್ಕೆ ಭದ್ರತೆಯಾಗಿ ನೀಡುವುದಾಗಲೀ ಸಾಧ್ಯವಿಲ್ಲ.

**02. ನಮ್ಮ ಬ್ಯಾಂಕಿನ ಗ್ರಾಹಕರೊಬ್ಬರು ನಮ್ಮ ಬ್ಯಾಂಕಿನಲ್ಲಿ ಸಾಲ ಪಡೆದಿದ್ದು, ಈಗ ಅವರು ಮೃತರಾದ ಕಾರಣ, ಸದರಿ ಸಾಲವನ್ನು ಅವರ ಪತ್ನಿ ಸಂಪೂರ್ಣ ಸಂದಾಯ ಮಾಡಿರುತ್ತಾರೆ. ಅದರಂತೆ ಅವರು ತಮ್ಮ ಸಾಲಕ್ಕೆ ಅಡಮಾನವಾಗಿ, ನಮ್ಮ ಬ್ಯಾಂಕಿಗೆ ನೀಡಿದ ಅವರ ಆಸ್ತಿಯ ಕಾಗದ ಪತ್ರಗಳನ್ನು ಮರಳಿ ನೀಡಲು ಹಾಗೂ ಭೋಜಾ ಕಡಿಮೆ ಮಾಡಿಕೊಡಲು ಕೋರಿ ಕೊಂಡಿರುತ್ತಾರೆ.**

**ಆದರೆ, ಮೃತರಾದ ಸಾಲಗಾರರು ಮತ್ತೊಬ್ಬ ಸಾಲಗಾರರಿಗೆ ಜಾಮೀನುದಾರರಾಗಿರುತ್ತಾರೆ. ಇವರು ಜಾಮೀನು ಆಗಿರತಕ್ಕಂತ ಸಾಲವು ಮುದ್ದತ ಮೀರಿ ಅಮಲ ಬಜಾವಣೆ ಪ್ರಕರಣದಲ್ಲಿರುತ್ತದೆ. ಸದರಿ ಸಾಲದ ವಸೂಲಾತಿಗಾಗಿ ಅನೇಕ ಸಾರಿ ಬಹಿರಂಗ ಹರಾಜು ಮೂಲಕ ಸಾಲ ಮರುಪಾವತಿಗೆ ಪ್ರಯತ್ನಿಸಲಾಗಿ, ಸದರಿ ಹರಾಜಿನಲ್ಲಿ ಯಾವುದೇ ಬಿಡ್‌ದಾರರು ಭಾಗವಹಿಸದ ಕಾರಣ ಹಾಗೂ ಸದರಿ ಸಾಲದ ಭದ್ರತೆಗಾಗಿ ನೀಡಿರತಕ್ಕಂತಹ ಆಸ್ತಿಗಳು "ಈ ಖಾತಾ" ಆಗಿರದೇ ಇರುವದರಿಂದ ತೊಂದರೆಯಾಗಿರುತ್ತದೆ. ಮೃತ ಜಾಮೀನುದಾರರ ಖಾತೆಗೆ ಸದರಿ ಸಾಲಗಾರರ ಚಾಲ್ತಿ ಖಾತೆಯಿಂದ ಸಾಲದ ಹಣ ನೇರವಾಗಿ ವರ್ಗಾವಣೆಯಾಗಿರುತ್ತದೆ. ಮೃತ ಜಾಮೀನುದಾರರ ಸ್ಥಿರಾಸ್ತಿಗಳೆಲ್ಲವೂ ಅವರ ಪತ್ನಿ ಹಾಗೂ ಮಕ್ಕಳ ಹೆಸರಿನಲ್ಲಿ ವಾರ್ಸಾ ಆಗಿರುತ್ತವೆ.**

**ಸದರಿ ಮೃತ ಜಾಮೀನುದಾರರ ಪತ್ನಿಯು ಪತಿಯ ಹೆಸರಿನಲ್ಲಿ ಇರತಕ್ಕಂತ ಸಾಲ ಪೂರ್ತಿ ಸಂದಾಯ ಮಾಡಿದ ನಂತರ ಮೂಲ ಆಸ್ತಿ ದಾಖಲೆಗಳನ್ನು ಮರಳಿ ಕೊಡುವಂತೆ ಆರ್.ಬಿ.ಐ. ಒಂಬಡ್ಸಮನ್ ಇವರಿಗೆ ದೂರು ಸಲ್ಲಿಸಿರುತ್ತಾರೆ. ಭಾರತೀಯ ರಿಜರ್ವ್ ಬ್ಯಾಂಕಿನ ಒಂಬಡ್ಸಮನ್ ಇವರಿಗೆ ಪತ್ರ ವ್ಯವಹಾರದ ಮೂಲಕ ಸದರಿ ವಿಷಯವನ್ನು ಮನವರಿಕೆ ಮಾಡಿಕೊಡಲಾಗಿದ್ದರೂ ಸಹಿತ, ಸದರಿ ಒಂಬಡ್ಸಮನ್ ಅಧಿಕಾರಿಗಳು ಮೂರೂ ದಿನಗಳಲ್ಲಿ ಮೂಲ ದಾಖಲಾತಿಗಳನ್ನು ಮೃತರ ಪತ್ನಿಗೆ ಮರಳಿ ಕೊಡುವಂತೆ ಈ ಮೇಲ್ ಮುಖಾಂತರ ತಿಳಿಸಿರುತ್ತಾರೆ. ಸದರಿ ದಾಖಲೆಗಳನ್ನು ಹಾಗೂ ಭೋಜಾ ಕಡಿಮೆ ಮಾಡಿಕೊಟ್ಟಲ್ಲಿ ಜಾಮೀನುದಾರರಾಗಿರತಕ್ಕಂತಹ ಸಾಲದ ಮರುಪಾವತಿಗೆ ತೊಂದರೆಯಾಗಿರುತ್ತದೆ. ಸಾಲಗಾರರಷ್ಟೇ ಜಾಮೀನುದಾರರು ಜವಾಬ್ದಾರರಾಗಿರುವದರಿಂದ ಹಾಗೂ ಮೃತ ಜಾಮೀನುದಾರರ ಆಸ್ತಿಗಳೆಲ್ಲವೂ ಅವರ ಪತ್ನಿಯ ಹೆಸರಿನಲ್ಲಿ ವರ್ಗಾವಣೆಯಾಗಿರುವದರಿಂದ ಪತಿಯ ಹೊಣೆಗಾರಿಕೆಗಳೆಲ್ಲವೂ ಅವರಿಗೆ ವರ್ಗಾವಣೆಯಾಗುವದು ಸಹಜ. ಈ ಕುರಿತು ಒಂಬಡ್ಸಮನ್ ಅಧಿಕಾರಿಗಳು ನೀಡಿದ ಆದೇಶಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ಗೆ ಅಪೀಲು ಹೋಗಲು ಬಯಸಿದ್ದೇವೆ. ಈ ಕುರಿತು ತಮ್ಮ ಅಮೂಲ್ಯ ಸಲಹೆ ನೀಡಲು ವಿನಂತಿಸಿಕೊಳ್ಳುತ್ತೇವೆ.**

**– ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಳಗಾವಿ ಜಿಲ್ಲೆ.**

**ಉತ್ತರ:** ಬ್ಯಾಂಕಿಂಗ್ ಒಂಬುಡ್ಸ್‌ಮನ್ ತನ್ನ ತೀರ್ಪಿನ ಪ್ರತಿಯನ್ನು ಬ್ಯಾಂಕಿಗೆ ಮತ್ತು ದೂರುದಾರರಿಗೆ ಕಳುಹಿಸಬೇಕು. ದೂರುದಾರ ತೀರ್ಪನ್ನು ಒಪ್ಪುವುದಾಗಿ ಒಂಬುಡ್ಸ್‌ಮನ್‌ಗೆ ಮೂವತ್ತು ದಿನಗಳೊಳಗೆ ತಿಳಿಸಬೇಕು. ದೂರುದಾರನ ಒಪ್ಪಿಗೆ ಪತ್ರತಲುಪಿದ ಮೂವತ್ತು ದಿನಗಳೊಳಗೆ ತೀರ್ಪನ್ನು ಜಾರಿಗೊಳಿಸಿದ ಪತ್ರವನ್ನು ಒಂಬುಡ್ಸ್‌ಮನ್‌ಗೆ ಬರೆಯಬೇಕು. ತೀರ್ಪನ್ನು ಒಪ್ಪದಿದ್ದಲ್ಲಿ ಬ್ಯಾಂಕು 30 ದಿನಗಳೊಳಗೆ ಮೇಲ್ಮನವಿ ಸಲ್ಲಿಸಬಹುದು. ಮೇಲಿನ ಪ್ರಕ್ರಿಯೆಯನ್ನು ಪಾಲಿಸದ ವಿರುದ್ಧ ಬ್ಯಾಂಕು ನ್ಯಾಯಾಲಯದ ಮೊರೆ ಹೋದಲ್ಲಿ ತಪ್ಪೇನಿಲ್ಲ.

## ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ನಿರ್ದೇಶಕರುಗಳ ಜವಾಬ್ದಾರಿ ಹಾಗೂ ಕರ್ತವ್ಯಗಳು

▸▸ ಹೆಚ್.ಎಸ್. ನಾಗರಾಜಯ್ಯ, ಕೆ.ಸಿ.ಎಸ್., ಸಹಕಾರ ಸಂಘಗಳ ಅಪರ ನಿಬಂಧಕರು (ನಿ), ಬೆಂಗಳೂರು.

...ಹಿಂದಿನ ಸಂಚಿಕೆಯಿಂದ

- ಬ್ಯಾಂಕಿನ ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ಆದಾಯ ಗುರುತಿಸುವುದು ಹಾಗೂ ಆಸ್ತಿ ವರ್ಗೀಕರಣ (IRAC) ಮತ್ತು ಅನುತ್ಪಾದಕ ಆಸ್ತಿ ಪ್ರಮಾಣಕ್ಕೆ ಅನುಗುಣವಾಗಿ ಲಾಭದಲ್ಲಿ ಅವಕಾಶ ಕಲ್ಪಿಸುವುದು ಆಡಳಿತ ಮಂಡಳಿಯ ಆದ್ಯ ಕರ್ತವ್ಯವಾಗಿದೆ.
- ಆಡಳಿತ ಮಂಡಳಿ ಪ್ರತಿ ಮಾಹೆಯ ಸಭೆಯಲ್ಲಿ ಅಭಿವೃದ್ಧಿ ಕ್ರಿಯಾ ಯೋಜನೆ (Development Action Plan) ಪ್ರಗತಿ ವಿಮರ್ಶೆ, ಸಿಬ್ಬಂದಿಗಳ ಕರ್ತವ್ಯಲೋಪ, ಕರ್ತವ್ಯಚ್ಯುತಿ, ನಿರ್ಲಕ್ಷತೆ ಬಗ್ಗೆ ಶಿಸ್ತು ಕ್ರಮ ಜರುಗಿಸುವುದು.
- ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ರೀತ್ಯಾ ಆಡಳಿತ ಮಂಡಳಿ ನಿರ್ದೇಶಕರು ಮಾಡುವ ಮತ್ತು ಮಾಡದಿರುವ (Dos & Don'ts)ಗಳ ಬಗ್ಗೆ ಗಮನವಹಿಸಿ ಅನುಪಾಲನೆ ಮಾಡುವುದು ಸಮಂಜಸ ಹಾಗೂ ಸೂಕ್ತವಾಗಿದೆ.
- ಬ್ಯಾಂಕಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡುವುದು ಹಾಗೂ ಅವರ ವಿರುದ್ಧ ಅವಿಶ್ವಾಸ ತಂದು ಅಧಿಕಾರದಿಂದ ಕೆಳಗಿಳಿಸುವ ಅಧಿಕಾರ ಆಡಳಿತ ಮಂಡಳಿ ಕಾಯ್ದೆ ರೀತ್ಯಾ ದತ್ತವಾಗಿರುತ್ತದೆ.

## ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಅತೀವ್ರ ಬಡತನದಿಂದ ನಲುಗಿರುವ ಧಾರವಾಡ ಜಿಲ್ಲೆಯ ಮಡಕಿಕೊಪ್ಪ ಎಂಬ ಪುಟ್ಟ ಗ್ರಾಮದಲ್ಲಿ 14–15 ಮನೆಗಳಿದ್ದರೆ, ಸುಮಾರು ನೂರು ಜನರಿದ್ದು, ಹೈನುಗಾರಿಕೆ ಮುಖ್ಯ ಉದ್ಯೋಗವಾಗಿದೆ. ಈ ಗ್ರಾಮವನ್ನು ಡಾ. ರಾಜನ್ ದೇಶಪಾಂಡೆ ನೇತೃತ್ವದ ವಿಟ್ಟಲ್ ಮಕ್ಕಳ ಆರೋಗ್ಯ ಸಂಸ್ಥೆಯು ದತ್ತು ಪಡೆದುಕೊಂಡಿದ್ದು, ಅಲ್ಲಿನ ನಿವಾಸಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದೆ.
- ಕಲಬುರಗಿ ಜಿಲ್ಲೆಯ ವಾಡಿ ಪುರಸಭೆಯು ತ್ಯಾಜ್ಯ ನಿವಾರಣೆಗೆ ಒಂದು ಪರಿಹಾರವನ್ನು ಕಂಡುಕೊಂಡಿದೆ. ಮನೆಯಲ್ಲಿರುವ ಬಳಕೆಯಾದ ಪ್ಲಾಸ್ಟಿಕ್ ಡಬ್ಬಿ, ಹಳೆ ಟಯರ್, ಕ್ಯಾರಿ ಬ್ಯಾಗ್‌ಗಳು, ಬಾಟಲಿಗಳು ಮತ್ತು ಪ್ಯಾಕಿಂಗ್ ವಸ್ತುಗಳಂತಹ ಪ್ಲಾಸ್ಟಿಕ್ ತ್ಯಾಜದಿಂದ ವರ್ಣರಂಜಿತ ಟೈಲ್ಸ್‌ಗಳನ್ನು ತಯಾರಿಸಲು ಬಳಸುತ್ತಿದೆ, ಈ ಟೈಲ್ಸ್‌ಗಳು ಇದೀಗ ಕಲಬುರಗಿಯಲ್ಲಿ ಜನಪ್ರಿಯವಾಗುತ್ತಿವೆ.
- ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆಯ ದಕ್ಷಿಣ ದಿಕ್ಕಿನಲ್ಲಿನ ಬೆಟ್ಟಗುಡ್ಡಗಳಲ್ಲಿ ನಡೆಯುತ್ತಿರುವ ಉತ್ಖನನ ವೇಳೆ ಅಪರೂಪದ ವಸ್ತುಗಳು ಸಿಕ್ಕಿವೆ. ಅಮೆರಿಕದ ಹಾರ್ಟ್ವಿಕ್ ವಿ.ವಿ.ಯ ಪ್ರೊ. ನಮಿತಾ ಎಸ್. ಸುಗಂಧಿ ನೇತೃತ್ವದ ಐವರು ತಜ್ಞರ ತಂಡ ಪ್ರಾಗೈತಿಹಾಸಿಕ ಕಾಲದ ನೆಲೆಗಳ ಅಧ್ಯಯನದಲ್ಲಿ ವಿವಿಧ ಗಾತ್ರದ ಅರೆಯುವ ಕಲ್ಲುಗುಂಡು, ಪ್ರಾಣಿಗಳ ಬೇಟೆಗೆ ಬಳಸುವ ಗುಂಡುಗಳು, ಚೂಪಾದ ಕೊಡಲಿಯಾಕಾರದ, ಚಪ್ಪಟೆ ಆಕಾರದ ಆಯುಧಗಳು, ಮಣ್ಣಿನ ಹೂಜಿಯ ತುಂಡು, ಮಣ್ಣಿನ ಪಾತ್ರೆಗಳ ಚೂರುಗಳು ಸಿಕ್ಕಿವೆ. ಆದಿಮಾನವರು ಒಂದೆಡೆ ನೆಲೆ ನಿಂತು ಕೃಷಿ ಮಾಡುವ ಮತ್ತು ಪಶುಪಾಲನೆ ಮಾಡುವ ಹಂತಕ್ಕೆ ದಾಟಿದ ತಿರುವಿನ ಘಟ್ಟದಲ್ಲಿ ಉದಯಿಸಿದ ಜನವಸತಿಗಳಲ್ಲಿ ತೆಕ್ಕಲಕೋಟೆಯೂ ಒಂದು ಎಂದು ತಜ್ಞರು ತಿಳಿಸಿದಾರೆ.
- ದಕ್ಷಿಣ ಕರ್ನಾಟಕದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾದ ಪಾವಗಡ ಒಂದು ಕಾಲದಲ್ಲಿ ಅತಿ ಬರ ಹಾಗೂ ನಕ್ಸಲ್ ಪೀಡಿತವಾಗಿತ್ತು. ಈಗ ಪರಿವರ್ತನೆಯ ಹಾದಿಯಲ್ಲಿದ್ದು, 230 ಕಿ.ಮೀ. ದೂರದಲ್ಲಿರುವ ತುಂಗಭದ್ರಾ ನದಿಯಿಂದ ಶುದ್ಧ, ಸಂಸ್ಕರಿಸಿದ ನೀರನ್ನು ಪಂಪ್ ಮಾಡಲಾಗುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕುಡಿಯುವ ನೀರಿನ ಯೋಜನೆ ಮತ್ತು ಸೌರಶಕ್ತಿ ಸೌಲಭ್ಯವನ್ನು ಉದ್ಘಾಟಿಸಿದ್ದಾರೆ.
- ರಾಜಸ್ಥಾನದ ಜೈಪುರದ ತಾರಾಚಂದ್ ಅಗರ್ವಾಲ್ ಅವರು ಬ್ಯಾಂಕಿನಿಂದ ನಿವೃತ್ತರಾದ ನಂತರ ತಮ್ಮ 71 ವಯಸ್ಸಿನಲ್ಲಿ ಚಾರ್ಟರ್ಡ್ ಅಕೌಂಟೆನ್ಸಿ ಅಂತಿಮ ಪರೀಕ್ಷೆಯನ್ನು ಪಾಸಾಗಿದ್ದಾರೆ.

## ಓದುಗರ ಅನಿಸಿಕೆ...



**ಉಪಯುಕ್ತ ಲೇಖನ :** ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ನಿರ್ದೇಶಕರುಗಳ ಜವಾಬ್ದಾರಿ ಹಾಗೂ ಕರ್ತವ್ಯಗಳ ಕುರಿತಂತೆ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಎಚ್.ಎಸ್. ನಾಗರಾಜಯ್ಯ ಅವರು ತಮ್ಮ ಲೇಖನದಲ್ಲಿ ಸರಳವಾಗಿ ತಿಳಿಸಿಕೊಡುತ್ತಿರುವುದು ನಮಗೆ ಉಪಯುಕ್ತವಾಗಿದ್ದು ಮುಂದಿನ ವಾರಗಳಲ್ಲಿ ಇದೇ ಬಗೆಯ ಹಲವು ವಿಷಯಗಳ ಬಗೆಯೂ ಅವರಿಂದ ಲೇಖನಗಳು ಬರಲಿ ಎಂದು ಅಪೇಕ್ಷಿಸುತ್ತೇವೆ.

▸▸ **ಮಹಾಂತೇಶ ಬಿರಾದಾರ., ಬಿಜಾಪುರ**

**ಹೆಚ್ಚಿನ ಪ್ರಗತಿ ಸಾಧಿಸಲಿ :** ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಕೂಡಲೆ ಮಹಾರಾಷ್ಟ್ರ ಹಾಗೂ ಗುಜರಾತ್ ಪಟ್ಟಣ ಸಹಕಾರ ಬ್ಯಾಂಕುಗಳಿಗೂ ಮಿಗಿಲಾಗಿ ಅಂಬ್ರೆಲಾ ಅರ್ಗನೈಜೇಷನ್ ಸಂಸ್ಥೆಗೆ ಷೇರು ಧನ ಪಾವತಿಸಿ ಸದಸ್ಯರಾಗುವ ಮೂಲಕ ಅಂಬ್ರೆಲಾದಡಿಯಲ್ಲಿ ಸಿಗುವ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಂಡು ಹೆಚ್ಚಿನ ಪ್ರಗತಿ ಸಾಧಿಸಲಿ ಎಂದು ಒತ್ತಾಯಿಸ ಬಯಸುತ್ತೇನೆ.

▸▸ **ಮಲ್ಲಿಕಾರ್ಜುನಯ್ಯ, ಎಂ., ದಾವಣಗೆರೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.